ದಿನಾಂಕಃ22–03–2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ Thermal Test ಮೂಲಕ ಪರೀಕ್ಷಿಸಿದಾಗ ಕೋವಿಡ್–19 ರ ಯಾವುದೇ ಲಕ್ಷಣಗಳು ಕಂಡುಬಂದಿರುವುದಿಲ್ಲ ಆ ಕಾರಣದಿಂದ ಸಾಕ್ಷಿದಾರರನ್ನು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಎಪಿಪಿ ಅವರಿಂದಃ**

ದಿಃ 17–08–2012 ರಂದು ಸುಖೋ ಬ್ಯಾಂಕ್ ನವರು ನಮ್ಮ ಠಾಣೆಗೆ ಹೆಚ್ಚುವರಿ ದಾಖಲೆಗಳನ್ನು ನಮ್ಮ ವಿನಂತಿ ಮೇರೆಗೆ ಒದಗಿಸಿರುತ್ತಾರೆ. ಈಗ ನೋಡುತ್ತಿರುವ ನಿಪಿ–78 ರಿಂದ ನಿಪಿ–91 ನಾನು ಸ್ವೀಕರಿಸಿದ ದಾಖಲೆಗಳು ಆಗಿರುತ್ತವೆ . ಅದೇ ದಿನ ಪಿರ್ಯಾದುದಾರರ ಮರುಹೇಳಿಕೆಯನ್ನು ಪಡೆದಿರುತ್ತೇನೆ .

ದಿಃ 19-08-2012 ರಂದು ಈ ಕೇಸಿನ ಸಾಕ್ಷಿದಾರರಾದ ಚಾಸಾ-7 , ಚಾಸಾ-9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ .

ದಿಃ 05-09-2012 ರಂದು ಚಾಸಾ-12 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 23-09-2012 ರಂದು 1 ಮತ್ತು 4 ನೇ ಆರೋಪಿತರು ಮಾನ್ಯ ಜಿಲ್ಲಾ ಸತ್ರ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಹಾಜರಾಗಿದ್ದು , ಮಾನ್ಯ ನ್ಯಾಯಾಲಯದ ಆದೇಶದಂತೆ ದಸ್ತಗಿರಿ ಮಾಡಿ , ದಸ್ತಗಿರಿ ನಿಯಮ ಪಾಲಿಸಿ, ಸದರಿ 1 ನೇ ಆರೋಪಿತಳು ಸಂದರಬಾಯಿ ಮತ್ತು 4 ನೇ ಆರೋಪಿತನು ಉದಯ ಗಾವಡೆ ರವರನ್ನು ವಿಚಾರಿಸಿದಾಗ ಅವರಲ್ಲಿ 1 ನೇ ಆರೋಪಿತಳು ಅವಳಿಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಆದರೆ ಸಹಿ ಮಾತ್ರ ಮಾಡುತ್ತೇನೆ ಎಂದು ತಿಳಿಸಿದ್ದು , ಆ ಕಾರಣದಿಂದ 1 ನೇ ಆರೋಪಿತಳ ಸಹಿಯನ್ನು 8 ಬಿಳಿ ಹಾಳೆಗಳ ಮೇಲೆ ಪಡೆದು ಅಂಚೆ ಲಕೋಟೆಯಲ್ಲಿ ಹಾಕಿ ಶೀಲ್ ಮಾಡಿ ತನಿಖೆಗಾಗಿ ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ . ಅದೇ ರೀತಿ 4 ನೇ ಆರೋಪಿತನ ಸ್ವ-ಇಚ್ಛಾ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ರೀತಿ 4 ನೇ ಆರೋಪಿತನಾದ ಉದಯ ಗಾವಡೆ ರವರು ಹಾಜರುಪಡಿಸಿದ ಡಿ.ಟಿ,ಡಿ ಪತ್ರ ಮತ್ತು ಅವನ ಸಹಿಗಳನ್ನು ಪಂಚರ ಸಮಕ್ಷಮದಲ್ಲಿ 8 ಬಿಳಿ ಹಾಳೆ ಮೇಲೆ ಪಡೆದು ಅಂಚೆ ಲಕೋಟೆಯಲ್ಲಿ ಹಾಕಿ ಶೀಲ್ ಮಾಡಿ ತನಿಖೆಗಾಗಿ ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ . ಈಗ ನೋಡುತ್ತಿರುವ ದಾಖಲೆ ನಿಪಿ- 46 ರಿಂದ ನಿಪಿ-61 ಸದರಿ 1 ನೇ ಆರೋಪಿತಳ ಮತ್ತು 4 ನೇ ಆರೋಪಿತರ ನಾನು ಪಂಚರ ಸಮ್ಮುಖದಲ್ಲಿ ಪಡೆದ ಸಹಿ ಇರುವ ಬಿಳಿಹಾಳೆಗಳು ಆಗಿರುತ್ತವೆ , ಅದರಲ್ಲಿರುವ ಸಹಿಗಳು ನನ್ನದು. ಸಾಕ್ಷಿ ಗುರುತಿಸಿರುವ ಸಾಕ್ಷಿಯ ಸಹಿಯನ್ನು ನಿಪಿ-46(ಸಿ) ಯಿಂದ ನಿಪಿ-61(ಸಿ) ಎಂದು ಗುರುತಿಸಲಾಯಿತು. ಅದೇ ರೀತಿ ಈಗ ನೋಡುತ್ತಿರುವ

ದಾಖಲೆ ನಿಪಿ-62 ಸದರಿ ಶೀಲ್ ಮಾಡಿದ ಲಕೋಟೆ ಆಗಿರುತ್ತದೆ, ಅದರಲ್ಲಿರುವ ಸಹಿ ನನ್ನದು . ಸಾಕ್ಷಿ ಗುರುತಿಸಿರುವ ಸಾಕ್ಷಿಯ ಸಹಿಯನ್ನು ನಿಪಿ- 62(ಸಿ ) ಎಂದು ಗುರುತಿಸಲಾಯಿತು.

ತದಾದನಂತರ ಆರೋಪಿತರನ್ನು ಮಾನ್ಯ ನ್ಯಾಯಾಲಯದ ಅದೇಶದಂತೆ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ .

ದಿಃ 03-10-2012 ರಂದು ಆರೋೀಪಿತರಿಂದ ಮತ್ತು ಚಾಸಾ-7 ವೈ.ಸಿ ನವಲಗುಂದ ರವರ ಮಾದರಿ ಸಹಿಗಳನ್ನು ಪರೀಕ್ಷಗೆ ಕಳುಹಿಸಲು ಮಾನ್ಯ ಡಿ.ವೈ.ಎಸ್.ಪಿ , ರಾಣೇಬೆನ್ನೂರು ರವರಿಂದ ಅನುಮತಿ ಪಡೆದು ಆ ಮಾದರಿ ಸಹಿಗಳನ್ನು ಅಂಚೆ ಲಕೋಟೆಗಳೊಂದಿಗೆ ವಿಧಿವಿಜ್ಞಾನ ಪರೀಕ್ಷೆಗಾಗಿ ದಿಃ 23-09-2012 ರಂದು ಮತ್ತು ದಿಃ 13-10-2021 ರಂದು ಕಳುಹಿಸಿರುತ್ತೇನೆ. ಈಗ ನೋಡುತ್ತಿರುವ ದಾಖಲೆಗಳು ನಾನು ವಿಧಿವಿಜ್ಞಾನ ಪರೀಕ್ಷೆಗಾಗಿ ಕಳುಹಿಸಿದ ಮನವಿಗಳು ಪತ್ರ ಆಗಿದ್ದು , ಅವುಗಳಲ್ಲಿರುವ ಸಹಿ ನನ್ನದು . ಸಾಕ್ಷಿ ಗುರುತಿಸಿದ ಸಹಿ ಇರುವ ಮನವಿ ಪತ್ರಗಳನ್ನು ನಿಪಿ-92 ಮತ್ತು ನಿಪಿ-93 ಎಂದು, ಸಾಕ್ಷಿಯ ಸಹಿಯನ್ನು ನಿಪಿ-92(ಎ) ಮತ್ತು ನಿಪಿ-93(ಎ) ಎಂದು ಗುರುತಿಸಲಾಯಿತು.

ಸದರಿ ಕೇಸಿನಲ್ಲಿ ಆರೋಪಿತರ ವಿರುದ್ಧ ಸಾಕಷ್ಟು ಪುರಾವೆಗಳು ಇದ್ದ ಕಾರಣ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ದಿಃ 13-01-2013 ರಂದು ವಿಧಿವಿಜ್ಞಾನ ಪರೀಕ್ಷೆಕರು ಕಳುಹಿಸಿಕೊಟ್ಟ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ರವಾನೆ ಮಾಡಿರುತ್ತೇನೆ ಈಗ ನೋಡುತ್ತಿರುವ ದಾಖಲೆ ನಾನು ವಿಧಿವಿಜ್ಞಾನಲಯ ರವರಿಂದ ಪಡೆದ ಪತ್ರವಾಗಿದ್ದು ಅದರಲ್ಲಿರುವ ಸಹಿ ನನ್ನದು . ಸಾಕ್ಷಿ ಒಪ್ಪಿರುವ ಸದರಿ ಪತ್ರವನ್ನು ನಿಪಿ-94 ಸಹಿಯನ್ನು ನಿಪಿ-94 (ಎ) ಎಂದು

ಗುರುತಿಸಲಾಯಿತು. ಸದರಿ ನಿಪಿ-94 ಪತ್ರದಲ್ಲಿ ವೈಸಿ. ನವಲಗುಂದ ರವರ ಸಹಿಗಳು ಸನ್ 2001 ಮತ್ತು ಸನ್ 2007 ಮತ್ತು ಮಾದರಿ ಸಹಿಗಳು ಅಂತಾ ಗುರುತಾಗಿರುವ R-1 to R-8 ಗಳು ಸನ್ 2012 ರಲ್ಲಿ ಪಡೆದುಕೊಂಡಂತಹ ಮಾದರಿ ಸಹಿಗಳು ಆಗಿದ್ದು , ಆ ಸಹಿಗಳ ಮಧ್ಯ ಬಹಳ ಅವಧಿ ವಿಳಂಬಇದ್ದ ಕಾರಣ ವರದಿ ನೀಡಲು ಸಾಧ್ಯವಾಗುವುದಿಲ್ಲ ಎಂದು ಪತ್ರ ರವಾನಿಸಿರುತ್ತಾರೆ. ಆ ಕಾರಣದಿಂದ ವಿಧಿವಿಜ್ಞಾಲಯರವರನ್ನು ದೋಷಾರೋಪಣಾ ಪಟ್ಟಿಯಲ್ಲಿ ಸಾಕ್ಷಿದರರನ್ನಾಗಿ ಮಾಡಿರುವುದಿಲ್ಲ .

ನ್ಯಾಯಾಲಯದ ಮುಂದಿರುವ 2 ನೇ ಆರೋಪಿತನು ಸದರಿ ಉದಯ ಗಾವಡೆ ಆಗಿದ್ದು , ಗೈರು ಹಾಜರು ಇದ್ದ 1 ನೇ ಆರೋಪಿ ಸುಂದರಬಾಯಿ ಗಾವಡೆ ರವರನ್ನು ನೋಡಿದರೆ ಗುರುತಿಸಬಲ್ಲೆ ( 1 ನೇ ಆರೋಪಿ ಪರ ವಕೀಲರು ಗೈರು ಹಾಜರಾತಿಯ ಬಗ್ಗೆ ಅರ್ಜಿಯನ್ನು ಸಲ್ಲಿಸಿದ್ದು ಮತ್ತು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲಾ ಎಂದು ತಿಳಿಸಿರುತ್ತಾರೆ .

**(ಪಾಟೀ ಸವಾಲಿಗಾಗಿ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ನನ್ನ ಸಮಕ್ಷಮ

sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಓ ಹೇ ಕೇ ಸರಿ ಇದೆ. ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.